ಶ್ರೀ ಜೆ. ನಾರಾಯಣಪ್ಪ.—ಪರಿಶಿಷ್ಟದಲ್ಲಿ ನಮೂದಿಸಿರುವ 11 ಜನ ಬಸ್ಸು ಮಾಲೀಕರ ಬಗ್ಗೆ ವಿಚಾರಣೆ ಕೊಟ್ಟಿರುವವರು ಯಾರು, ಅವರ ಪೈಕಿ ಸ್ವಂತವಾಗಿ ಬಸ್ಸು ನಡೆಸುವವರೆಷ್ಟು ಜನ, ಕಂಟ್ರಾಕ್ಟ್‌ರಿಗೆ ಕೊಟ್ಟಿರುವವರೆಷ್ಟು ಮುಂದಿ ಎಂಬುದನ್ನು ಪರಿಶೀಲಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಯಾರಾದರೂ ಇದ್ದಾರೆಯೆ ಎಂಬುದನ್ನು ವಿಚಾರ ಮಾಡುತ್ತಿದ್ದೇವೆ.

Sale of Tractors on Hire-Purchase System.

Q.—425. Sri G. DUGGAPPA. (Holalkere—Scheduled Castes).—

Will the Government be pleased to state :—

(*a*) total number of raiyats who have purchased the tractors on hire purchase system ;

(*b*) (i) the total number of tractors sold ; (ii) the number of old tractors which were in the Agricultural Department ;

(*c*) the concession at which these tractors were sold to the raiyats ;

(*d*) whether it has come to the notice of the Government that most of these tractors are not useful as they were not in order ;

(*e*) whether the raiyats were also supplied with the spare parts ;

(i) if so, the rate at which they were sold ;

(ii) whether there are different rates of the same spare parts of the same quality ?

A.—Dr. R. NAGAN GOWDA (Minister for Agriculture).—

(*a*) 25 persons.

(*b*) (i) Twenty-five tractors.

(ii) One hundred and twenty-one.

(*c*) Two at actual book value and the remainder at 20 per cent discount over cost price.

(*d*) No.

(*e*) Yes.

(i) actual book value.

(ii) rates vary according to market conditions.

Sri G. DUGGAPPA.— What is the basis to fix the value of the tractors, Sir ?

Mr. SPEAKER.—There is the answer in (*e*).

Sri G. DUGGAPPA.— Whether there were any representations by the tractor owners to Government seeking redress, Sir ?

*ಡಾ॥ ಆರ್. ನಾಗನಗೌಡ.—ಹಾಗೆ ರಿಡ್ರೆಸ್ ಕೇಳಲು ಕಾರಣವೇನು ?

ಶ್ರೀ ಜಿ. ದುಗ್ಗಪ್ಪ.— ಸರ್ಕಾರದಿಂದ ಸರಬರಾಯಿಯಾಗಿರುವ ಟ್ರಾಕ್ಟರುಗಳು ಉಪಯೋಗಕ್ಕೆ ಬರುತ್ತಿಲ್ಲ, ಹೆಚ್ಚು ಬೆಲೆ ಕೊಟ್ಟಿರುವುದರಿಂದ ಬಹಳ ನಷ್ಟವಾಗಿದೆ. ಆದ್ದರಿಂದ ಸರ್ಕಾರ ಏನಾದರೂ ರಿಯಾಯಿತಿ ತೋರಿಸಬೇಕು ಎಂದು ಸರ್ಕಾರದಲ್ಲಿ ಮನವಿಮಾಡಿಲ್ಲವೆ ?

ಡಾ॥ ಆರ್. ನಾಗನಗೌಡ.—ರೈತರು ಬಂದು ಟ್ರಾಕ್ಟರುಗಳನ್ನು ನೋಡಿ ಅವು ಕೆಲಸಮಾಡುವುದನ್ನೂ ನೋಡಿ ತೆಗೆದುಕೊಂಡು ಹೋಗಿದ್ದಾರೆ. ಹಾಗೆ ತೆಗೆದುಕೊಂಡು ಹೋದವೇರೆ ಚೆನ್ನಾಗಿ ಕೆಲಸವಾಡುತ್ತಿಲ್ಲವೆಂದು ಸರ್ಕಾರಕ್ಕೆ ಕಂಪ್ಲೇಂಟ್ ಮಾಡಿದ್ದಾರೆ. ಟ್ರಾಕ್ಟರುಗಳು ಮೋಟಾರುಕಾರುಗಳ ಹಾಗೆ ಚೆನ್ನಾಗಿ ಕೆಲಸಮಾಡಬೇಕಾದದ್ದು ಅವಶ್ಯಕ. ಒಂದು ಸಾವಿರ ರೂಪಾಯಿ ಕೊಟ್ಟು ಟ್ರಾಕ್ಟರುಗಳನ್ನು ತೆಗೆದುಕೊಂಡು ಥರೋ ಡ್ರೈವರನ್ನಿಡದೆ ಅಥವ ಇಟ್ಟಿರುವ ವನಿಗೆ ಸರಿಯಾಗಿ ಸಂಬಳಕೊಡವೆ ಇದ್ದರೆ ಟ್ರಾಕ್ಟರು ಕೆಡುತ್ತದೆ. ಆದರೂ ತಾವು ಹೇಳಿದ ಹಾಗೆ ಮನವಿ ಬಂದಿದೆ. ಅದನ್ನು ವಿಚಾರಮಾಡಬೇಕು.

ಶ್ರೀ ಎ. ಭೀಮಪ್ಪನಾಯಕ್.—ಈ ವಿಚಾರದಲ್ಲಿ ಸರ್ಕಾರದವರಿಗೂ ಕೂಡ ತಲೆನೋವು ಬಂದಿತ್ತಲ್ಲವೇ ? ಅದಾದ ಮೇಲೆ ತಾನೆ ಅವರು ಬೇರೆಯವರಿಗೆ ಕೊಟ್ಟಿದ್ದು ?

(No answer.)

ಶ್ರೀ ಜಿ. ಶಿವಪ್ಪ.—ಈ ಟ್ರಾಕ್ಟರುಗಳನ್ನು ಕೊಂಡು ಕೊಂಡಿರುವವರ ಮನೆತನಗಳೆಲ್ಲಾ ಹಾಳಾಗಿ ಹೋಗಿವೆ ಅಲ್ಲವೇ ?

(No answer.)

ಶ್ರೀ ಬಿ. ಚಿಕ್ಕಣ್ಣ.—ಈ ಸಾಲಿನಲ್ಲಿ ಎಷ್ಟು ಟ್ರಾಕ್ಟರುಗಳನ್ನು ಹೊಸದಾಗಿ ಕೊಂಡುಕೊಳ್ಳಬೇಕೆಂದಿದೆ ?

ಡಾ॥ ಆರ್. ನಾಗನಗೌಡ.—ಈ ಸಾಲಿನಲ್ಲಿ 2½ ಲಕ್ಷ ರೂಪಾಯಿಗಳ ಖರೀದಿಯ ಟ್ರಾಕ್ಟರುಗಳನ್ನು ಹೊಸದಾಗಿ ಕೊಂಡು ರೈತರಿಗೆ ಕೊಡುವುದಕ್ಕೆ ಏರ್ಪಾಡುಮಾಡಿದ್ದೇವೆ. ಇವುಗಳೆಲ್ಲಾ ಪೂರ್ತಿ ಹೊಸವು. ಅವರಾಗಿಯೇ ಟ್ರಾಕ್ಟರ್ ಮಾರುವವರಲ್ಲಿಗೆ ಹೋಗಿ ನೋಡಿಕೊಂಡು ತೆಗೆದುಕೊಂಡು ಬರುವುದಕ್ಕೆ ಏರ್ಪಾಡುಮಾಡಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಈ ಸಾರಿ ರೈತರಿಂದ ಅರ್ಜಿಗಳು ಹೆಚ್ಚಿಗೆ ಬಂದಿವೆ, ಎಷ್ಟು ಜನರಿಗೂ ಟ್ರಾಕ್ಟರುಗಳನ್ನು ಒದಗಿಸುವುದಕ್ಕಾಗುವುದಿಲ್ಲವೆಂದು ಹೇಳಿದ್ದು ನಿಜವೇ ?

ಡಾ॥ ಆರ್. ನಾಗನಗೌಡ.—ಈ ಟ್ರಾಕ್ಟರುಗಳನ್ನು ಕಂತಿನಮೇಲೆ ಕೊಡುವುದಕ್ಕೆಂದು ಹೇಳಿ ನಾವು ಇಂಡಿಯಾ ಸರ್ಕಾರದವರಿಂದ ಸಾಲ ತೆಗೆದುಕೊಂಡಿದ್ದೇವೆ. ನಾವು ಎಷ್ಟು ಸಾಲ ತೆಗೆದುಕೊಂಡಿದ್ದೇವೋ ಅದಕ್ಕೆ ಸರಿಯಾಗಿ ಟ್ರಾಕ್ಟರುಗಳನ್ನು ಪಡೆದಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಈಗ ನೀವು ಪಡೆದಿರುವ ಟ್ರಾಕ್ಟರುಗಳಿಂದ ಒಂದು ತಾಲ್ಲೂಕಿಗೆ ಒಂದರಂತಾದರೂ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ತಾಲ್ಲೂಕಿಗೊಂದರಂತೆ ಆಗುವುದಿಲ್ಲ, ಡಿಸ್ಟ್ರಿಕ್ಟ್‌ಗೊಂದರಂತೆ ಕೊಡಬಹುದು.

ಶ್ರೀ ಜಿ. ಬನಪ್ಪ.—ಈಗ 2½ ಲಕ್ಷ ರೂಪಾಯಿಗಳಿಗೂ ಪೂರ್ತಿಯಾಗಿ ಟ್ರಾಕ್ಟರುಗಳನ್ನು ತೆಗೆದುಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ತೆಗೆದುಕೊಂಡಿದ್ದೇವೆ.

ಶ್ರೀ ಜಿ. ಬನಪ್ಪ.—ಅವುಗಳನ್ನು ಮಾರ್ಚಿಯ ಅಖ್ಯೆರೊಳಗೆ ರೈತರಿಗೆ ದೊರೆಯುವಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಮಾರ್ಚಿ ಅಖ್ಯೆರೊಳಗೆ ಕೊಡುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಜಿ. ಬನಪ್ಪ.—ಇದುವರೆಗೂ ಯಾವುದಾದರೂ ಟ್ರಾಕ್ಟರುಗಳನ್ನು ಸರಬರಾಯಿ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಅರ್ಜಿಗಳು ಬಂದಿವೆ. ಟ್ರಾಕ್ಟರುಗಳನ್ನು ಕೇಳಿರುವವರು ಇಂತಿಂಥ ಟ್ರಾಕ್ಟರುಗಳು ಬೇಕೆಂದು ಹೇಳಿದ್ದಾರೆ. ಮಾರ್ಚಿ 31ನೆಯ ತಾರೀಖಿನ ಹೊತ್ತಿಗೆ ಒದಗಿಸುತ್ತೇವೆ.

ಶ್ರೀ ಜಿ ಬನಪ್ಪ.—ಕೇಂದ್ರ ಸರ್ಕಾರದವರು ಈ ಬಗ್ಗೆ 2½ ಲಕ್ಷ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಆರು ತಿಂಗಳ ಮೇಲೆ ಆಯಿತಲ್ಲವೇ ?

ಡಾ॥ ಆರ್. ನಾಗನಗೌಡ.—ಅವರು ಹಣ ಕೊಟ್ಟ ಮೇಲೆ ನಾವು ಯಾವ ರೀತಿ ಕಾರ್ಯಕ್ರಮ ಕೈಕೊಳ್ಳಬೇಕು ಎಂಬುದನ್ನೆಲ್ಲಾ ಆಲೋಚನೆಮಾಡಿ ಅರ್ಜಿಗಳನ್ನು ಕರೆಯಬೇಕಾಗಿತ್ತು. ಮಳೆ ಬಂದು ಉಳುಮೆ ಮಾಡುವ ವೇಳೆಗೆ ಕೊಡುತ್ತೇವೆ.

ಶ್ರೀ ಜಿ. ಬನಪ್ಪ.—ಮಾರ್ಚಿ 15 ರೊಳಗೆ ಹಣ ಪಾವತಿ ಆಗದೆ ಇದ್ದರೆ ಅಕೌಂಟೆಂಟ್ ಜನರಲ್‌ರವರು ಅದರ ಬಗ್ಗೆ ಒದಗಿಸಿರುವ ಹಣ ಲ್ಯಾಪ್ಸ್ ಆಯಿತೆಂದು ಹೇಳುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಇಲ್ಲ ; ಮಾರ್ಚಿ 31ರ ವರೆಗೆ ಅವಕಾಶವಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳು ಕೆಲಸಮಾಡಿ ಎಷ್ಟು ದಿವಸಗಳಾಯಿತು ? ಎಷ್ಟು ದಿವಸಗಳಿಂದ ಕೆಟ್ಟುಹೋಗಿ ನಿಂತಿವೆ ?

ಡಾ॥ಆರ್. ನಾಗನಗೌಡ.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೂರು ತಿಂಗಳಿನಿಂದ ಕೆಲಸ ಮಾಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಕೆಲವು ಟ್ರಾಕ್ಟರುಗಳು ಹಾಗಾಗಿಗುವುದು ನಮ್ಮ ಗಮನಕ್ಕೆ ಬಂದಿದೆ. ಮರು ಟಪಾಲಿಗೇ ನಮಗೆ ಆ ಸಮಾಚಾರ ತಿಳಿಯುವ ಏರ್ಪಾಡು ಮಾಡಿದೆ. ಆ ಸಮಾಚಾರ ತಿಳಿದ ಕೂಡಲೇ ರಿಪೇರಿಮಾಡಿಸುತ್ತೇವೆ. ಇನ್ನು ಮೇಲೆ ಅರೀತಿ ತೊಂದರೆಯಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ. ಈಗ ಮೂರು ತಿಂಗಳಿನಿಂದ ಚಿಕ್ಕಮಗಳೂರಿನಲ್ಲಿರುವುದು ರಿಪೇರಿ ಆಗದೆ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ಬಂದಿದೆ. ಆದರೆ ನಮ್ಮಲ್ಲಿ ಬಹಳ ಟ್ರಾಕ್ಟರುಗಳಿವೆ. ಸಮಾಚಾರ ಬಂದ ಮೇಲೆ ಆದಷ್ಟು ಬೇಗ ಸರಿಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Mr. SPEAKER.—Questions Nos. 300 and 602 are of similar nature. They may be taken up together.

National Extension Service Scheme in the State : Progress.

Q.—300. Sri M. RAJASEKHARA MURTHY (Yelandur).—

Will the Government be pleased to state :—

(*a*) the total number of villages selected by the Government for the execution of National Extension Service Scheme in the State ;

(*b*) the names of the taluks or centres wherein these villages are situated ;

(*c*) the amount spent so far, in each centre ?

A.—Dr. R. NAGAN GOWDA (Minister for Agriculture).—

(*a*) About 700 villages at the rate of about 100 villages in each block.

(*b*) 1. Gundlupet Taluk.
2. Ramanagaram *cum* Kanakapura Taluks.
3. Holenarsipur *cum* Arkalgud Taluks.
4. Harihar--Davangere Taluks.
5. Koppa–Narasimharajapura Taluks.
6. Sidlaghatta Taluk.
7. Turuvekere Taluk.

(*c*) The staff are being recruited and actual work programme has just commenced. The preliminaries such as, survey, collection of statistics are going on with the help of the existing Revenue Department staff. Developmental plans are being worked out by several Departments.

Q.—602. Sri SIDDIAH *alias* KUNNIAH (Gundlupet-Heggaddevanakote—Scheduled Castes).—

Will the Government be pleased to state :—

(*a*) when the community project extension scheme was introduced throughout the State ;